# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
## ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-65
## ದುರ್ಗದ ನಾಗೇನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

**ದಿನಾಂಕ: 17.08.20**

**ಈ ವಾರದ ಮುನ್ಸೂಚನೆ (18.8.20 ರಿಂದ 22.8.20 ವರೆಗೆ)**

| ನಿಯತಾಂಕಗಳು | 18-08-20 | 19-08-20 | 20-08-20 | 21-08-20 | 22-08-20 |
|---|---|---|---|---|---|
| ಮಳೆ (ಮಿ ಮಿ) | 4.3 | 1.7 | 4 | 5.4 | 0 |
| ಗರಿಷ್ಠ ಉಷ್ಣಾಂಶ (ಡಿ.ಸೆ.) | 29.3 | 30 | 30.3 | 29.7 | 31.1 |
| ಕನಿಷ್ಠ ಉಷ್ಣಾಂಶ (ಡಿ.ಸೆ.) | 19.3 | 19.5 | 20 | 19.4 | 20.4 |
| ಮೋಡ (ಪ್ರಮಾಣ) | 7 | 7 | 8 | 8 | 8 |
| ಅರ್ದ್ರತೆ 7.20 ಬೆ (ಶೇ) | 90 | 90 | 89 | 89 | 87 |
| ಅರ್ದ್ರತೆ 2.20 ಮ (ಶೇ) | 60 | 57 | 53 | 50 | 45 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 18 | 17 | 15 | 13 | 12 |
| ಗಾಳಿಯ ದಿಕ್ಕು (ಡಿಗ್ರಿ) | 248 | 248 | 248 | 248 | 257 |

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ದುರ್ಗದ ನಾಗೇನಹಳ್ಳಿ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಮೋಡ ಕವಿದ ವಾತಾವರಣವಿದ್ದು, ಹಗುರ ಮಳೆಯಾಗುವ ಸಂಭವವಿದೆ, ದಿನದ **ಗರಿಷ್ಠ ಉಷ್ಣಾಂಶವು 29-31 °C ಮತ್ತು ಕನಿಷ್ಠ 19-20 °C ಇರಲಿದೆ**. ಬೆಳಗಿನ ಆರ್ದ್ರತೆ ಪ್ರಮಾಣ ಶೇ 87-90% ಇದ್ದು, ಮಧ್ಯಾಹ್ನ 45-60% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 12-18 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

**ಮಗೆ ಮಳೆಯ ಕಾಲವು ಆಗಸ್ಟ್ ತಿಂಗಳ 17 ರಿಂದ ಆಗಸ್ಟ್ ತಿಂಗಳ 30 ರವರೆಗೆ ಇರುತ್ತದೆ.** ಈ ನಕ್ಷತ್ರದ ಪೂರ್ವ ಒಣ ವಲಯದ **ಸರಾಸರಿ ಮಳೆಯು 62.8 ಮಿ.ಮೀ. ವರೆಗೆ** ಮಳೆಯಾಗುತ್ತದೆ.

## ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಮೋಡಕವಿದ ಮತ್ತು ತುಂತುರು ಮಳೆಯ ಮುನ್ಸೂಚನೆ ಇರುವುದರಿಂದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಸಸ್ಯ ಸಂರಕ್ಷಣೆ ಸಿಂಪಡಣೆಗಳನ್ನು ಕೆಲ ದಿನಗಳವರೆಗೆ ಮುಂದೂಡಿ.
- ಕಳೆದ ಒಂದು ತಿಂಗಳಿನಿಂದ ವಾಡಿಕೆಗಿಂತ ಕಡಿಮೆ ಮಳೆಯಾಗಿರುವುದರಿಂದ ಕೃಷಿ ಹೊಂಡದಲ್ಲಿ ಶೇಕರಣೆಯಾಗಿರುವ ನೀರನ್ನು ಉಪಯೋಗಿಸಿ ಬೆಳೆಗಳಿಗೆ ರಕ್ಷಣಾತ್ಮಕ ನೀರಾವರಿಯನ್ನು ಕೊಡುವುದು ಸೂಕ್ತ.
- ಗಾಳಿಯ ವೇಗವು ಹೆಚ್ಚಾಗಿರುವ್ಯದರಿಂದ ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಔಷದ ಸಿಂಪಡಣೆಯನ್ನು ಮುಂದೂಡಿ.
- ಎಲ್ಲೆಲ್ಲಿ ದೀರ್ಘಾವದಿ ಬೆಳೆಗಳು (ತೊಗರಿ ಮತ್ತು ಹರಳು) ಬಿತ್ತನೆ ಮಾಡಿದಲ್ಲಿ ಕಳೆ ನಿರ್ವಹಣೆ, ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಅಂತರ ಬೇಸಾಯವನ್ನು ಕೈಗೊಳ್ಳುವುದು.

- ದ್ವಿದಳ ಧಾನ್ಯ ಬೆಳೆಗಳನ್ನು ಬಿತ್ತುವ ಮುನ್ನ ಜೈವಿಕ ಗೊಬ್ಬರಗಳಾದ ರೈಜೋಬಿಯಮ್ ನಿಂದ ಬೀಜೋಪಚಾರ ಮಾಡಬೇಕು.

- ಆಗಸ್ಟ್ ತಿಂಗಳಲ್ಲಿ ಬಿತ್ತನೆ ಮಾಡಬೇಕಾದ ಬೆಳೆಗಳು: ತೇವಾಂಶದ ಆಧಾರದ ಮೇಲೆ ಬಿತ್ತನೆ ಮಾಡಬೇಕು

  ಏಕಬೆಳೆ ಪದ್ಧತಿಯಲ್ಲಿ ಈ ಕೆಳಗಿನ ದೀರ್ಘಾವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ

  ತೊಗರಿ : ಟಿ.ಟಿ.ಬಿ–7, ಬಿ.ಆರ್.ಜಿ–1,2,4 ಮತ್ತು 5

  ಎರಡುಬೆಳೆ ಪದ್ಧತಿಯಲ್ಲಿ ಈ ಕೆಳಗಿನ ಮಧ್ಯಮು ಅವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ

  ರಾಗಿ: ಎಂ.ಆಲ್–365, ಕೆ,ಎಂ.ಆರ್–301 ಮತ್ತು 204, ಜಿ.ಪಿ.ಯು–28 ಮತ್ತು 66

  ನೆಲಗಡಲೆ: ಟಿ.ಎಮ್.ವಿ–2, ಜೆ.ಎಲ್–24, ಕೆ.ಸಿ.ಜಿ–2 ಮತ್ತು 6

  ಶಕ್ತಿಮಾನ್ ಜೋಳದ ತಳಿಗಳಾದ ಡೆಕ್ಕನ್–103, ವಿಜಯ ಕಾಂಪೋಸಿಟ್ ಮತ್ತು ಗಂಗಾ–11

  ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1

  ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ

  ನವಣೆ: ಆರ್.ಎಸ್–118, ಕೆ–221–1,ಪಿ.ಎಸ್–4, ಎಸ್.ಐ.ಎ–326

  ಸಾಮೆ: ಸಿ.ಒ–2, ಪಿ,ಆರ್.ಸಿ–3,ಒ.ಎಲ್.ಎಂ–203

  ಹಾರಕ: ಪಿ.ಎಸ್.ಸಿ–1, ಜೆ.ಎನ್.ಕೆ–364, ಆರ್.ಬಿ.ಕೆ–155, ಜಿ.ಪಿ.ಯು.ಕೆ–3

- ಜಾನುವಾರು: ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.

- ಸಸ್ಯ ಸಂರಕ್ಷಣೆ: ಗಾಳಿಯ ವೇಗವು ಹೆಚ್ಚಾಗಿರುವುದರಿಂದ ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಔಷದ ಸಿಂಪಡಣೆಯನ್ನು ಮುಂದೂಡಿ.


ನೋಡಲ್ ಅಧಿಕಾರಿ:
ಕೃಷಿ ಹವಾಮಾನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು